# <u>ಕೃಷ್ಣ ಎನಬಾರದೆ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 163.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 64.
3. **Note:** The lyrics mentioned in Ref. 2 (given in yellow highlights) are almost similar to that of the singer. But the lyrics are different in the book mentioned in Ref. 1 above. They are given separately without highlights.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 193. Here, the lyrics and stanzas are slightly different. Hence, they are given separately in green background.
5. **Note:** The lyrics in Ref. 2 are followed by many singers and many books and many websites. I have also noticed that there are so many extra stanzas and extra wordings.
6. **Note:** There is one more song similar to this. That is “nara janma bandaga naalige iruvaga” – ”ನರಜನ್ಮ ಬಂದಾಗ ನಾಲಿಗೆ ಇರುವಾಗ”. This is listed as a different song because, many singers have sung it like this. Also, this line is not there in book in Ref. 1 above.

ರಾಗ: ಕಾಂಬೋಧಿ ತಾಳ: ಛಾಪು

ಕೃಷ್ಣ ಎನಬಾರದೆ
ಕೃಷ್ಣನ್ನ ನೆನೆದರೆ ಕಷ್ಟ ಒಂದಿಷ್ಟಿಲ್ಲ || ಪ ||
ನರಜನ್ಮ ಬಂದಾಗ ನಾಲಿಗೆ ಇರುವಾಗ
ಕೃಷ್ಣ ಎನಬಾರದೆ || ಅಪ ||

ಮಲಗಿದ್ದು ಮೈಮುರಿದೇಳುತಲೊಮ್ಮೆ
ಕೃಷ್ಣ ಎನಬಾರದೆ
ಸುಳಿದಾಡುತ ಮನೆಯೊಳಗಾದರು ಒಮ್ಮೆ
ಕೃಷ್ಣ ಎನಬಾರದೆ || 1 ||

ಸ್ನಾನ ಪಾನ ಜಪ ತಪಗಳ ಮಾಡುತ
ಕೃಷ್ಣ ಎನಬಾರದೆ
ಶಾಲ್ಯಾನ್ನ ಷಡುರಸ ತಿಂದು ತೃಪ್ತನಾಗಿ

ರಾಗ: ಸೌರಾಷ್ಟ್ರ ತಾಳ: ಛಾಪು

ಮೆರೆಯಿಲ್ಲದೆ ಮಾತಾಡುತಲಿರಲೊಮ್ಮೆ
ಕೃಷ್ಣ ಎನಬಾರದೆ
ದಾರಿಯ ನಡೆಯುತ ಭಾರವ ಹೊರುವಾಗ
ಕೃಷ್ಣ ಎನಬಾರದೆ || ಪ ||

ತಿರುಗಾಡುತ ಮನೆಯೊಳಗಾದರು ಒಮ್ಮೆ
ಕೃಷ್ಣ ಎನಬಾರದೆ
ಪರಿಪರಿ ಕೆಲಸದೊಳಿದುವೊಂದು ಕೆಲಸವು
ಕೃಷ್ಣ ಎನಬಾರದೆ

ಮಲಗಿಯೆದ್ದು ಮೈಮುರಿದೇಳುತಲೊಮ್ಮೆ
ಕೃಷ್ಣ ಎನಬಾರದೆ
ಹಲವು ಯೋಚಿಸುತಲಿ ಮಂದಿರದಲಿ ಒಮ್ಮೆ

ಕೃಷ್ಣ ಎನಬಾರದೆ || 2 ||

ಗಂಧವ ಪೂಸಿ ತಾಂಬೂಲ ಮೆಲುವಾಗ
ಕೃಷ್ಣ ಎನಬಾರದೆ
ಚೆಂದುಳ್ಳ ಹಾಸಿಗೆಯೊಳು ಕುಳಿತೊಮ್ಮೆ
ಕೃಷ್ಣ ಎನಬಾರದೆ || 3 ||

ಕಂದನ ಬಿಗಿ ಬಿಗಿದಪ್ಪಿ ಮುದ್ದಾಡುತ
ಕೃಷ್ಣ ಎನಬಾರದೆ
ಮಂದಗಾಮಿನಿಯೊಳು ಸರಸವಾಡುತಲೊಮ್ಮೆ
ಕೃಷ್ಣ ಎನಬಾರದೆ || 4 ||

ಮೇರೆ ತಪ್ಪಿ ಮಾತನಾಡುವಾಗಲೊಮ್ಮೆ
ಕೃಷ್ಣ ಎನಬಾರದೆ
ದಾರಿಯ ನಡೆವಾಗ ಭಾರವ ಹೊರುವಾಗ
ಕೃಷ್ಣ ಎನಬಾರದೆ || 5 ||

ಪರಿಹಾಸ್ಯದ ಮಾತನಾಡುತಲೊಮ್ಮೆ
ಕೃಷ್ಣ ಎನಬಾರದೆ
ಪರಿಪರಿ ಕೆಲಸದೊಳೊಂದು ಕೆಲಸವೆಂದು
ಕೃಷ್ಣ ಎನಬಾರದೆ || 6 ||

ದುರಿತ ರಾಶಿಗಳನು ತರಿದು ಬಿಸಾಡುವ
ಕೃಷ್ಣ ಎನಬಾರದೆ
ಗರುಡ ಗಮನ ನಮ್ಮ ಪುರಂದರ ವಿಠಲನ
ಕೃಷ್ಣ ಎನಬಾರದೆ || 7 ||

ಕೃಷ್ಣ ಎನಬಾರದೆ

ಚೆಂದುಳ್ಳ ಹಾಸಿಗೆ ಮೇಲೆ ಕುಳಿತು ಒಮ್ಮೆ
ಕೃಷ್ಣ ಎನಬಾರದೆ
ಕಂದನ ಬಿಗಿದಪ್ಪಿ ಮುದ್ದಾಡುತಲೊಮ್ಮೆ
ಕೃಷ್ಣ ಎನಬಾರದೆ

ಗಂಧವ ಪೂಸಿ ತಾಂಬೂಲ ಮೆಲ್ಲುತಲೊಮ್ಮೆ
ಕೃಷ್ಣ ಎನಬಾರದೆ
ಮಂದಗಮನೆಯೊಳು ಸರಸವಾಡುತಲೊಮ್ಮೆ
ಕೃಷ್ಣ ಎನಬಾರದೆ

ಕ್ಷೀರಸಾಗರಶಯನ ನೀನೇ ಗತಿಯೆಂದು
ಕೃಷ್ಣ ಎನಬಾರದೆ
ದ್ವಾರಕಾಪುರವಾಸ ಪುರಂದರ ವಿಠ್ಠಲ
ಕೃಷ್ಣ ಎನಬಾರದೆ

**Note:** The lyrics given below are as per Ref. 4 above:

ರಾಗ: ಸೌರಾಷ್ಟ್ರ ತಾಳ: ಛಾಪು

ಕೃಷ್ಣ ಎನಬಾರದೆ
ಕೃಷ್ಣನ್ನ ನೆನೆದರೆ ಕಷ್ಟ ಒಂದಿಷ್ಟಿಲ್ಲ || ಪ ||
ನರಜನ್ಮ ಬಂದಾಗ ನಾಲಿಗೆ ಇರುವಾಗ
ಕೃಷ್ಣ ಎನಬಾರದೆ || ಅಪ ||

ಮಲಗಿದ್ದು ಮೈಮುರಿದು ಏಳುತ್ತಲೊಮ್ಮೆ
ಕೃಷ್ಣ ಎನಬಾರದೆ, ನಿತ್ಯ
ಸುಳಿದಾಡುತ ಮನೆಯೊಳಗಾದರು ಒಮ್ಮೆ
ಕೃಷ್ಣ ಎನಬಾರದೆ || 1 ||

ಮೇರೆ ತಪ್ಪಿ ಮಾತನಾಡುವಾಗಲೊಮ್ಮೆ
ಕೃಷ್ಣ ಎನಬಾರದೆ, ದೊಡ್ಡ
ದಾರಿಯ ನಡೆವಾಗ ಭಾರವ ಹೊರುವಾಗ
ಕೃಷ್ಣ ಎನಬಾರದೆ || 2 ||

ಗಂಧವ ಪೂಸಿ ತಾಂಬೂಲ ಮೆಲುವಾಗ
ಕೃಷ್ಣ ಎನಬಾರದೆ, ತನ್ನ
ಮಂದಗಮನೆ ಕೂಡ ಸರಸವಾಡುತಲೊಮ್ಮೆ
ಕೃಷ್ಣ ಎನಬಾರದೆ || 3 ||

ಪರಿಹಾಸ್ಯದ ಮಾತನಾಡುತ್ತಲೊಮ್ಮೆ
ಕೃಷ್ಣ ಎನಬಾರದೆ, ಪರಿ
ಪರಿ ಕೆಲಸದೊಳೊಂದು ಕೆಲಸವೆಂದು
ಕೃಷ್ಣ ಎನಬಾರದೆ || 4 ||

ಕಂದನ ಬಿಗಿದಪ್ಪಿ ಮುದ್ದಾಡುತ್ತಲೊಮ್ಮೆ
ಕೃಷ್ಣ ಎನಬಾರದೆ, ಬಹು
ಚೆಂದುಳ್ಳ ಹಾಸಿಗೆ ಮೇಲೆ ಕುಳಿತೊಮ್ಮೆ
ಕೃಷ್ಣ ಎನಬಾರದೆ || 5 ||

ನೀಗದಾಲೋಚನೆ ರೋಗೋಪದ್ರುದಲೊಮ್ಮೆ
ಕೃಷ್ಣ ಎನಬಾರದೆ, ಒಳ್ಳೇ
ಭೋಗ ಪಡೆದು ಅನುರಾಗದಿಂದಿರುವಾಗ
ಕೃಷ್ಣ ಎನಬಾರದೆ || 6 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಾಮಸ್ಮರಣೆಗೆ ಒಂದು ನಿಗದಿಯಾದ ವೇಳೆ ಎಂಬುದಿಲ್ಲ. ಎದ್ದ ಕೂಡಲೇ ಈ ಕ್ರಿಯೆ ಆರಂಭಗೊಳ್ಳಬೇಕು ಎಂದು ಪುರಂದರ ದಾಸರು ಆಶಿಸುತ್ತಾರೆ. ಓಡಾಡುವಾಗ, ಕೆಲಸ ಮಾಡುತ್ತಿರುವಾಗ, ಶೃಂಗಾರದ ಸಂದರ್ಭಗಳಲ್ಲೂ, ರಸಿಕತನದ ಸಂದರ್ಭಗಳಲ್ಲೂ, ವೈಭವ ಸಂಭ್ರಮಗಳ ಸಂದರ್ಭಗಳಲ್ಲೂ ನಾಮಸ್ಮರಣೆ ಅಗತ್ಯ ಎನ್ನುತ್ತಾರೆ. ಹಾಸ್ಯದ ಸಂದರ್ಭದಲ್ಲಿರಲಿ ಮೇರೆ ತಪ್ಪಿ ಮಾತನಾಡುವ ಸಂದರ್ಭದಲ್ಲಿ ಕೂಡ ನಾಮಸ್ಮರಣೆ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

**Classification:** Keerthane
**Ankita:** purandara vittala
**Location:** NA
**Category:** Krishna Stuti, Jeevanoddhara, Nama Smarane, Aartha Bhava.
**Sub-Category:** Krishna, garuda, nalige, nara, janma, snana, japa, gandha, hasige, ksheera, dwaraka, Samudra, malagu, koosu, roga, bhoga, dari, mane,
**Pravachana:** Vid. Anantha Krishna Acharya
**Explanation:** NA